OS 11/2017
PW-01

<u>ದಿನಾಂಕಃ 27-11-2025.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ ಶ್ರೀ SVK ಮಾನ್ಯ ವಕೀಲರಿಂದ ನಿಯೋಜಿತ 21 ನೇ ಪ್ರತಿವಾದಿ ಪರವಾಗಿ</u>**

1. ನನ್ನ ತಂದೆಯವರ ಹೆಸರು ಶ್ರೀ ಶಂಕ್ರಪ್ಪ ಎಂದರೆ ಸರಿ. ಸದರಿ ಶಂಕ್ರಪ್ಪ ಇವರಿಗೆ ಶ್ರೀ ಸಿದ್ದಲಿಂಗಪ್ಪ ಎನ್ನುವವರು ಅಣ್ಣನಾಗಿರುತ್ತಾರೆ. ಸದರಿ ಸಿದ್ದಲಿಂಗಪ್ಪ ಇವರು ಸುಮಾರು 60 -70 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನನ ತಂದೆಯವರು ಕೂಡಾ ತೀರಿಕೊಂಡು 60-70 ವರ್ಷಗಳಾಗಿರುತ್ತವೆ. ನನ್ನ ತಂದೆ ಹಾಗೂ ಸದರಿ ಸಿದ್ದಲಿಂಗಪ್ಪ ಇವರು ತಮ್ಮ ಜೀವಿತ ಕಾಲಾವಧಿಯಲ್ಲಿ ಸ್ವತ್ತುಗಳಲ್ಲಿ ಪಾಲು ವಾಟ್ನಿಯನ್ನು ಮಾಡಿಕೊಂಡಿದ್ದರು ಎಂದರೆ ಸರಿ. ಸದರಿಯವರಿಬ್ಬರು ಸದರಿ ವಾಟ್ನಿಯನ್ನು ಮಾಡಿಕೊಂಡು 70 ವರ್ಷಗಳಾಗಿರುತ್ತವೆ ಎಂದರೆ ಸರಿ.

ಸದರಿ ವಾಟ್ನಿಯಲ್ಲಿ ಸದರಿ ಸಿದ್ದಲಿಂಗಪ್ಪ ಇವರಿಗೆ ಸ.ನಂ.129 ರಲ್ಲಿ 07 ಎಕರೆ 05 ಗುಂಟೆ ಹಾಗೂ ಸ.ನಂ.131/3 ರಲ್ಲಿ 06 ಎಕರೆ 11 ಗುಂಟೆ ಜಮೀನುಗಳು ಬಂದಿದ್ದವು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಈಗ ಸದರಿ ವಾಟ್ನಿಯಲ್ಲಿ ಸದರಿ ಸಿದ್ದಲಿಂಗಪ್ಪ ಇವರಿಗೆ ಸ.ನಂ.131/3 ರಲ್ಲಿ 06 ಎಕರೆ 11 ಗುಂಟೆ, ಸ.ನಂ.7 ರಲ್ಲಿ 08 ಎಕರೆ 07 ಗುಂಟೆ, ಸ.ನಂ. 72 ರಲ್ಲಿ 07 ಎಕರೆ 32 ಗುಂಟೆ, ಸ.ನಂ. 124 ರಲ್ಲಿ 27 ಎಕರೆ 20 ಗುಂಟೆ, ಸ.ನಂ.130 ರಲ್ಲಿ 21 ಎಕರೆ 12 ಗುಂಟೆ, ಸ.ನಂ.131/6 ರಲ್ಲಿ 06 ಎಕರೆ 11 ಗುಂಟೆ. ಸ.ನಂ.193 ರಲ್ಲಿ 02 ಎಕರೆ 17 ಗುಂಟೆ, ಸ.ನಂ.173 ರಲ್ಲಿ 11 ಎಕರೆ ಹಾಗೂ ಸ.ನಂ.15 ರಲ್ಲಿ 07 ಎಕರೆ 24 ಗುಂಟೆ ಜಮೀನುಗಳು ಬಂದಿದ್ದವು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಈಗ ಸದರಿ ಸಿದ್ದಲಿಂಗಪ್ಪ ಇವರು ತೀರಿಕೊಂಡ ನಂತರ ಸದರಿ ಈ ಮೇಲೆ ಹೇಳಿರುವ ಎಲ್ಲಾ ಜಮೀನುಗಳು ನಿಯೋಜಿತ ಪ್ರತಿವಾದಿ 21 ರವರ ಹೆಸರಿಲ್ಲಿರುತ್ತವೆ ಎಂದು ಹೇಳಿದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

2. ನನ್ನ ತಂದೆಯವರಿಗೆ ಮೂರು ಜನ ಹೆಂಡತಿಯರು ಎಂದರೆ ಸರಿ. ಸದದರಿಯವರೇಂದರೆ ಶ್ರೀಮತಿ ಪರಮ್ಮ, ಶ್ರೀಮತಿ ರಾಮಲಿಂಗಮ್ಮ ಹಾಗೂ ನನ್ನ ತಾಯಿ ಶಂಕರಲಿಂಗಮ್ಮ ಎಂದರೆ ಸರಿ. ಸಾಕ್ಷಿಗೆ

ಈಗ ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ನಿಯೋಜಿತ 21 ನೇ ಪ್ರತಿವಾದಿಯನ್ನು ಯಾವ ಕಾರಣಕ್ಕಾಗಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದು ಕೇಳಿದಕ್ಕೆ ಸಾಕ್ಷಿ ತಮ್ಮ ತಂದೆಯವರ ಸ್ವತ್ತುಗಳಲ್ಲಿ ತಾವು ಭಾಗ ಕೇಳುತ್ತೀರುವುದಾಗಿ ಹೇಳುತ್ತಾರೆ. ನಿಯೋಜಿತ 21 ನೇ ಪ್ರತಿವಾದಿಯನ್ನು ತೊಂದರೆ ಕೊಡಲು ಈ ಮೊದಲು ಅವರನ್ನು ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.